0201

**Second Semester of Three Year LL.B. Examination, January 2011**
**CONTRACT – II (Course – I)**

Duration : 3 Hours                                                                 Max. Marks : 100

**Instructions** :
1. Answer all **5** Questions.
2. **One** essay type and **one** short note question or problem from **each unit** have to be attempted, which is referred as part (a) and (b) in all the units.
3. Figures to the **right** indicate marks.
4. Answers should be written **either** in English or Kannada **completely**.

## UNIT – I

Q. No. 1. (a) Explain the circumstances in which a surety can be discharged from his liability. Marks : 15

ಯಾವ ಯಾವ ಸಂದರ್ಭಗಳಲ್ಲಿ ಜಾಮೀನುದಾರನೊಬ್ಬನು ತನ್ನ ಬಾಧ್ಯತೆಯಿಂದ ಮುಕ್ತನಾಗುತ್ತಾನೆ ಎಂಬುದನ್ನು ವಿವರಿಸಿ.

OR/ಅಥವಾ

Define 'Pledge'. Explain the rights and duties of Pledgee.

'ಗಿರವಿ' ಯನ್ನು ವ್ಯಾಖ್ಯಾನಿಸಿ. ಗಿರವಿಧಾರಕನ ಹಕ್ಕು ಮತ್ತು ಕರ್ತವ್ಯಗಳನ್ನು ವಿವರಿಸಿ.

(b) 'A' finds a golden ring and makes reasonable efforts to discover the true owner, but could not find him. Later the finder 'A' sells it to 'B', who buys it without knowledge that 'A' was merely a finder. Can the true owner recover the ring from 'B' ? Marks : 5

'ಅ' ಎಂಬಾತನಿಗೆ ಚಿನ್ನದ ಉಂಗುರ ದೊರಕುತ್ತದೆ. 'ಅ' ನು ಅದರ ಯಜಮಾನನನ್ನು ಹುಡುಕುವ ಸರಿಯಾದ ಪ್ರಯತ್ನ ಮಾಡಿದರೂ, ಅವನು ದೊರೆಯಲಿಲ್ಲ. ನಂತರ 'ಅ' ನು ಆ ಉಂಗುರವನ್ನು 'ಬ' ನಿಗೆ ಮಾರುತ್ತಾನೆ. ಚಿನ್ನದ ಉಂಗುರ 'ಅ' ನಿಗೆ ಸಿಕ್ಕವಸ್ತು ಎಂಬ ಅರಿವಿಲ್ಲದೆ 'ಬ' ನು ಅದನ್ನು ಕೊಳ್ಳುತ್ತಾನೆ. ನಿಜವಾದ ಯಜಮಾನ ಆ ಉಂಗುರವನ್ನು 'ಬ' ನಿಂದ ಮರಳಿ ಪಡೆಯಬಹುದೆ ?

OR/ಅಥವಾ

'A' hires a carriage of 'B'. The carriage is unsafe. 'B' is not aware of it. 'A' is injured while using the carriage. Is 'B' liable to 'A' ? Will it make any difference if the bailment is gratuitous ? Decide.

'ಅ' ನು 'ಬ' ನ ವಾಹನವನ್ನು ಬಾಡಿಗೆಗೆ ತೆಗೆದುಕೊಳ್ಳುತ್ತಾನೆ. ಆ ವಾಹನವು ಸುರಕ್ಷಿತವಾಗಿಲ್ಲ. ಆದರೆ ಅದು ಸುರಕ್ಷಿತವಾಗಿಲ್ಲವೆಂದು 'ಬ' ನಿಗೆ ಗೊತ್ತಿಲ್ಲ. 'ಅ' ನು ಬಾಡಿಗೆ ವಾಹನವನ್ನು ಉಪಯೋಗಿಸುವಾಗ ಗಾಯಗೊಳ್ಳುತ್ತಾನೆ. 'ಬ'ನು 'ಅ' ನ ಗಾಯಕ್ಕೆ ಹೊಣೆಗಾರನೇ ? ಒಂದು ವೇಳೆ ವಾಹನವನ್ನು ಪುಕ್ಕಟೆಯಾಗಿ ನಿಕ್ಷೇಪಿಸಲಾಗಿದ್ದರೆ 'ಬ' ನ ಹೊಣೆಗಾರಿಕೆಯಲ್ಲಿ ವ್ಯತ್ಯಾಸವಾಗುತ್ತದೆಯೇ ? ನಿರ್ಧರಿಸಿ.

## UNIT – II

Q. No. 2. (a) What is the 'Test of Agency' ? Discuss the extent of an agent's authority. Marks : 15

'ಅಭಿಕರಣ ' ವನ್ನು (ಕಾರ್ಯಭಾರತ್ವ ) ಗುರುತಿಸಲು ಇರುವ ಪರೀಕ್ಷೆ ಯಾವುದು ? ಕಾರ್ಯಭಾರಿಯೊಬ್ಬನ ಅಧಿಕಾರದ ವ್ಯಾಪ್ತಿಯನ್ನು ಚರ್ಚಿಸಿರಿ.

OR/**ಅಥವಾ**

Explain the different modes of termination of an agency.

ಕಾರ್ಯಭಾರತ್ವವನ್ನು ಮುಕ್ತಾಯಗೊಳಿಸುವ ವಿವಿಧ ರೀತಿಗಳನ್ನು ವಿವರಿಸಿ.

(b) Write a note on 'Agency by Ratification'. Marks : 5

ಸಕ್ರಮಗೊಳಿಸುವಿಕೆಯಿಂದಾದ ಅಭಿಕರಣದ (ಕಾರ್ಯಭಾರತ್ವ) ಬಗ್ಗೆ ಟಿಪ್ಪಣಿಯೊಂದನ್ನು ಬರೆಯಿರಿ.

OR/**ಅಥವಾ**

Explain :

i) Del Credere agent

ii) Agency coupled with interest.

ವಿವರಿಸಿ :

i) ಡೆಲ್ ಕ್ರೆಡರೆ ಕಾರ್ಯಭಾರಿ

ii) ಹಿತಾಸಕ್ತಿಯಿಂದೊಡಗೂಡಿದ ಅಭಿಕರಣ.

## UNIT – III

Q. No. 3. (a) Explain the consequences of dissolution of a partnership firm. Marks : 15

ಪಾಲುಗಾರಿಕೆ ಸಂಸ್ಥೆಯೊಂದರ ವಿಘಟನೆಯಿಂದ ಆಗುವ ಪರಿಣಾಮಗಳನ್ನು ವಿವರಿಸಿ.

OR/**ಅಥವಾ**

Explain :

i) Effects of Non-Registration of Partnership Firm.

ii) Implied Authority of a Partner.

ವಿವರಿಸಿ :

i) ಪಾಲುಗಾರಿಕೆ ಸಂಸ್ಥೆ ನೋಂದಣಿಯಾಗದಿರುವುದರ ಪರಿಣಾಮಗಳು

ii) ಪಾಲುದಾರನೊಬ್ಬನ ಸೂಚ್ಯ (ಅವ್ಯಕ್ತ) ಅಧಿಕಾರ.

(b) A, B and C are carrying on business in partnership under an agreement which provides that the profits will be shared by them equally, but the losses will be borne equally by A and B alone. 'x' a creditor of the firm sues 'C'.

Decide whether 'C' is liable. Marks : 5

‘ಅ’, ‘ಬ’ ಮತ್ತು ‘ಕ’ ಎನ್ನುವವರು ಪಾಲುಗಾರಿಕೆ ಸಂಸ್ಥೆಯೊಂದರ ವ್ಯಾಪಾರ ನಡೆಸುತ್ತಿದ್ದು ಲಾಭಗಳನ್ನು ತಮ್ಮಗಳ ಮಧ್ಯ ಸಮನಾಗಿ ಹಂಚಿಕೊಳ್ಳಬೇಕು ಆದರೆ ನಷ್ಟಗಳನ್ನು ‘ಅ’ ಮತ್ತು ‘ಬ’ ಮಾತ್ರ ಸಮನಾಗಿ ಹಂಚಿಕೊಳ್ಳತಕ್ಕದ್ದು ಎಂದು ಕರಾರು ಮಾಡಿಕೊಂಡಿದ್ದಾರೆ. ‘‘ಕ್ಷ’’ ಎನ್ನುವ ಆ ಸಂಸ್ಥೆಯ ಸಾಲಿಗನು ‘ಕ’ ಪಾಲುದಾರನ ವಿರುದ್ಧ ದಾವೆ ಹೂಡಿದ್ದಾನೆ. ‘ಕ’ ನು ಹೊಣೆಗಾರನೇ ? ನಿರ್ಧರಿಸಿ.

OR/**ಅಥವಾ**

A, B and C are partners of a partnership firm. ‘C’ who is an active partner retires without giving public notice. ‘x’ supplies the goods to the firm after C’s retirement. Advise ‘x’ as to the recovery of amount of the goods supplied.

‘ಅ’, ‘ಬ’ ಮತ್ತು ‘ಕ’ ಪಾಲುಗಾರಿಕೆ ಸಂಸ್ಥೆಯೊಂದರ ಪಾಲುದಾರರು. ಪ್ರವರ್ತಕ ಪಾಲುಗಾರನಾಗಿದ್ದ ‘ಕ’ ನು ಸಾರ್ವಜನಿಕ ಸೂಚನೆ ಕೊಡದೆ ಸಂಸ್ಥೆಯಿಂದ ನಿವೃತ್ತಿ ಹೊಂದುತ್ತಾನೆ. ತದನಂತರ ‘ಕ್ಷ’ನು ಸಂಸ್ಥೆಗೆ ಸರಕುಗಳನ್ನು ಪೂರೈಸುತ್ತಾನೆ. ‘ಕ್ಷ’ ನು ಸರಕುಗಳನ್ನು ಪೂರೈಸಿದ ಹಣವನ್ನು ವಸೂಲಿ ಮಾಡಿಕೊಳ್ಳುವುದರ ಬಗ್ಗೆ ಸಲಹೆ ನೀಡಿ.

## UNIT – IV

Q. No. 4. (a) Explain in brief conditions and warranties implied by law under a contract of sale of goods. Marks : 15

ಸರಕುಗಳ ಮಾರಾಟದ ಕರಾರಿನಲ್ಲಿ ಬರುವ ಸೂಚ್ಯ ಷರತ್ತುಗಳು ಮತ್ತು ಭರವಸೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

OR/**ಅಥವಾ**

Explain the maxim “nemo dat quod non habet” and state the exceptions, if any.

‘‘ಯಾವನೇ ಒಬ್ಬನು ತಾನು ಹೊಂದಿರುವ ಅಧಿಕಾರನಾಮಕ್ಕಿಂತ ಹೆಚ್ಚಿನದನ್ನು ಹಸ್ತಾಂತರಮಾಡಲಾರನು’’ – ಎಂಬ ಹೇಳಿಕೆಯನ್ನು ವಿವರಿಸಿ ಮತ್ತು ಇದಕ್ಕೇನಾದರೂ ಅಪವಾದಗಳಿದ್ದರೆ ತಿಳಿಸಿ.

(b) ‘A’ agrees to purchase 10 tons of apple juice from ‘B’ on a specified date. ‘B’ crushes the apples, puts the juice ready for delivery on that specified date. ‘A’ delays to take the delivery and the juice goes putrid and has to be thrown away. Is ‘A’ liable to pay the juice ? Marks : 5

ಒಂದು ಗೊತ್ತುಪಡಿಸಿದ ದಿನದಂದು ‘ಅ’ ನು ‘ಬ’ ನಿಂದ 10 ಟನ್ನು ಸೇಬು ರಸವನ್ನು ಕೊಳ್ಳಲು ಒಪ್ಪಂದ ಮಾಡಿಕೊಳ್ಳುತ್ತಾನೆ. ‘ಬ’ ನು ಆ ಗೊತ್ತುಪಡಿಸಿದ ದಿನದಂದು ಸೇಬುಹಣ್ಣಿನ ರಸ ತೆಗೆದು ರಸವನ್ನು ‘ಅ’ ನಿಗೆ ಒಪ್ಪಿಸಲು ಸಿದ್ಧನಾಗುತ್ತಾನೆ. ಆದರೆ ‘ಅ’ ನು ರಸವನ್ನು ಸ್ವೀಕರಿಸಲು ವಿಳಂಬ ಮಾಡಿದ್ದರಿಂದ ಆ ರಸ ಕೊಳೆತು ಹೋಗಿ ಚೆಲ್ಲಿ ಬಿಡಬೇಕಾಗುತ್ತದೆ. ‘ಅ’ ನು ಅದರ ಬೆಲೆಯನ್ನು ಕೊಡಲು ಹೊಣೆಗಾರನೇ ?

OR/**ಅಥವಾ**

‘A’ a jeweller, delivered some jewellery to ‘B’ “On Sale or return basis”. ‘B’ pledged the jewellery with a pawn-broker, although he had not paid the price there of to ‘A’. There upon ‘A’ sues ‘B’ for sale price.

Can he succeed ?

‘ಅ’ ಎನ್ನುವ ಒಡವೆಗಳ ವ್ಯಾಪಾರಿಯೊಬ್ಬ ಹಲವು ಒಡವೆಗಳನ್ನು ‘ಬ’ ಎಂಬುವನಿಗೆ ‘‘ಕ್ರಯ ಇಲ್ಲವೆ ಹಿಂತಿರುಗಿಸು’’ ವೆಂಬ ಷರತ್ತಿನ ಮೇಲೆ ಅವನ ವಶಕ್ಕೆ (ಸ್ವಾಧೀನತೆಗೆ) ಕೊಟ್ಟನು. ಈ ಒಡವೆಗಳ ಹಣ ‘ಅ’ ಗೆ ಪಾವತಿಸದೆ, ಈ ಒಡವೆಗಳನ್ನು ‘ಬ’ ನು ಗಿರವಿಧಾರಕನೊಬ್ಬನ ಹತ್ತಿರ ಗಿರವಿ ಇಡುತ್ತಾನೆ. ಪ್ರಯುಕ್ತ, ‘ಅ’ ನು ‘ಬ’ ನ ಮೇಲೆ ಒಡವೆಗಳ ಕ್ರಯದ ಮೊಬಲಿಗೆಗೋಸ್ಕರ ದಾವೆ ಹಾಕುತ್ತಾರೆ.
ಈ ಪ್ರಕರಣದಲ್ಲಿ ‘ಅ’ ನು ಗೆಲ್ಲುವರೇ ?

## UNIT – V

Q. No. 5. (a) Define ‘Hire-Purchase Agreement’ and discuss its salient features. Marks : 15

‘ಬಾಡಿಗೆ ಖರೀದಿ ಒಪ್ಪಂದ’ ವನ್ನು ವ್ಯಾಖ್ಯಾನಿಸಿ ಮತ್ತು ಅದರ ವಿಶಿಷ್ಟ ಗುಣಲಕ್ಷಣಗಳನ್ನು ಚರ್ಚಿಸಿರಿ.

OR/**ಅಥವಾ**

Explain the rights and obligations of the owner in an Hire-Purchase Agreement.

ಕಂತು–ಖರೀದಿ ಒಪ್ಪಂದವೊಂದರಲ್ಲಿ ಸರಕುಗಳ ಮಾಲೀಕನ ಹಕ್ಕು ಮತ್ತು ಬಾಧ್ಯತೆಗಳು ಯಾವುವು ಎಂಬುದನ್ನು ವಿವರಿಸಿ.

(b) Distinguish Hire-Purchase Agreement from a contract of sale of Goods. Marks : 5

ಕಂತು–ಖರೀದಿ ಒಪ್ಪಂದವು ಸರಕುಗಳ ಮಾರಾಟದ ಕರಾರಿನಿಂದ ಹೇಗೆ ಭಿನ್ನವಾಗಿರುತ್ತದೆ ಎಂಬುದನ್ನು ವಿವರಿಸಿ.

OR/**ಅಥವಾ**

Write a note on ‘Assignment and Transmission of Hirer’s Rights’.

ಕಂತು–ಖರೀದಿದಾರನ ಹಕ್ಕುಗಳ ನಿಯೋಜನೆ ಮತ್ತು ಜಾರಿಗೊಳಿಸುವಿಕೆ (ಮುಂದುವರಿಕೆ).